## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರ

**ಸಿ.ಸಿ. ಸಂಖ್ಯೆ : 1474/2025**

ಫಿರ್ಯಾದಿ : ಶ್ರೀ ರವಿಕುಮಾರ ತಂದೆ ಶಂಕ್ರಪ್ಪ ಚಬ್ಬಿ
ವಯಸ್ಸು : 25 ವರ್ಷ, ಉ: ಶೇತ್ಕಿ
ವಾಸ: ಯಲವಿಗಿ ಗ್ರಾಮ,
ತಾಃ ಸವಣೂರ, ಜಿಃ ಹಾವೇರಿ

**ವಿರುದ್ಧ**

ಆರೋಪಿ : ಸಂಗೀತಾ ಕೋಂ. ಸಂತೋಷ ಕೊಳ್ಳಿ
ವಯಸ್ಸು : 30 ವರ್ಷ,
ವಾಸ: ಯಲವಿಗಿ ಗ್ರಾಮ,
ತಾಃ ಸವಣೂರ, ಜಿಃ ಹಾವೇರಿ

**ಆಪಾದನೆ**

ಮೇಲ್ಕಾಣಿಸಿದ ಆರೋಪಿತರಾದ ನೀವು ನಿಮ್ಮ ಗೃಹಕೃತ್ಯದ ಸಲುವಾಗಿ ಫಿರ್ಯಾದಿ ಹತ್ತಿರ ಕೈಗಡ ಸಾಲ ರೂ.2,00,000/- ಪಡೆದುಕೊಂಡು ನಂತರ ಸದರಿ ಹಣವನ್ನು ಹಿಂದಿರುಗಿಸುವ ಸಲುವಾಗಿ ನೀವು ನಿಮ್ಮ ಖಾತೆಯುಳ್ಳ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಯಲವಿಗಿ ಶಾಖೆಯ ಚೆಕ್ ನಂ.20437 ಅನ್ನು ದಿನಾಂಕ 03-08-2025 ರಂದು ಚೆಕ್ಕನ್ನು ಹಾಜರಪಡಿಸಿ ಸದರಿ ಚೆಕ್ಕಿನಲ್ಲಿ ರೂ.2,00,000/- ಗಳನ್ನು ಪಡೆದುಕೊಳ್ಳಲು ಫಿರ್ಯಾದಿದಾರರಿಗೆ ಕೊಟ್ಟಿರುತ್ತೀರಿ. ನೀವು ನೀಡಿದ ಚೆಕ್ಕನ್ನು ಫಿರ್ಯಾದುದಾರರು ತಮ್ಮ ಖಾತೆ ಹೊಂದಿದ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಯಲವಿಗಿ ಶಾಖೆ ಇವರಲ್ಲಿ ನಗದೀಕರಣಕ್ಕಾಗಿ ಸಲ್ಲಿಸಿದಾಗ 'ಆರೋಪಿತನ ಖಾತೆಯಲ್ಲಿ ಹಣ ಇರುವುದಿಲ್ಲ (Funds insufficient)' ಅಂತಾ ಹೇಳಿ ಸದರಿ ಬ್ಯಾಂಕಿನವರು ಫಿರ್ಯಾದಿಯವರಿಗೆ ದಿನಾಂಕ 01-09-2025 ರಂದು ಹಿಂಬರಹವನ್ನು ನೀಡಿ ಸದರಿ ಚೆಕ್‌ನ್ನು ಹಿಂದಿರುಗಿಸಿರುತ್ತಾರೆ. ದಿನಾಂಕ 10-09-2025 ರಂದು ಫಿರ್ಯಾದಿಯವರು ತಮ್ಮ ವಕೀಲರ ಮುಖಾಂತರ ಆರೋಪಿತರಾದ ನಿಮಗೆ ನೋಟೀಸನ್ನು ನಿಮ್ಮ ವಿಳಾಸಕ್ಕೆ ಕಳುಹಿಸಿದಾಗ, ಆರೋಪಿತರಾದ ನಿಮಗೆ ದಿನಾಂಕ : 20-09-2025 ರಂದು ಸದರಿ ನೋಟೀಸು ನಿಮಗೆ ಜಾರಿ ಆಗಿದ್ದರೂ ಸದರಿ ಅಗೌರವಗೊಂಡ ಚೆಕ್ಕಿನಲ್ಲಿ ನಮೂದಿಸಿದ ರೂ.2,00,000/- ಗಳನ್ನು ಮೋಸಮಾಡುವ ದುರುದ್ದೇಶದಿಂದ ಫಿರ್ಯಾದುದಾರರಿಗೆ ಈವರೆಗೂ ಮರಳಿ ಕೊಟ್ಟಿರುವುದಿಲ್ಲ, ಆ ಮೂಲಕ ಕಲಂ.138 ವರ್ಗಾವಣೆ ಲಿಖಿತಗಳ

ಅಧಿನಿಯಮದಡಿಯಲ್ಲಿ ಆರೋಪಿತರಾದ ನೀವು ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

(ಶ್ರೀನಿವಾಸ. ಎಸ್.ಎನ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು ಸವಣೂರ.

<u>ಆರೋಪಿ ಉತ್ತರ</u>

ಪ್ರಶ್ನೆ 1 : ಈಗ ನಿಮಗೆ ಓದಿ ಹೇಳಿದ ಆಪಾದನೆಯ ಸಾರಾಂಶ ತಿಳಿಯಿತೇ ?
ಉತ್ತರ :

ಪ್ರಶ್ನೆ 2 : ಈ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೋ ?
ಉತ್ತರ :

(ಈ ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ ಆರೋಪಿ ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿದೆ ಎಂದು ಪ್ರಮಾಣಿಕರಿಸುತ್ತೇನೆ)

ದಿನಾಂಕ : 27-11-2025

ಸಿ.ನ್ಯಾ. ಮತ್ತು
ಪ್ರ.ದ.ನ್ಯಾ.ದಂ.ಗಳು, ಸವಣೂರ.

ಆರೋಪಿ ಸಹಿ: